# ಶ್ರೀ ಜಗದ್ಧಾತ್ರೀ ಪೂಜೆ

ಬ್ರಹ್ಮಚಾರಿ ಭರತ್

ಜಗನ್ಮಾತೆಯ ಆರಾಧನೆಯಲ್ಲಿ ಅವಳ ಅನೇಕ ರೂಪಗಳ ಆರಾಧನೆ ಕಂಡುಬರುತ್ತದೆ. ಇಂತಹ ಒಂದು ದೈವೀರೂಪವೇ ಜಗದ್ಧಾತ್ರೀ. ಶಾಸ್ತ್ರಗ್ರಂಥಗಳಲ್ಲೂ, ಪರಂಪರೆಯಲ್ಲೂ ಕಂಡುಬರುವ ಜಗದ್ಧಾತ್ರೀ ಪೂಜೆಯು ರಾಮಕೃಷ್ಣ ಮಹಾಸಂಘದಲ್ಲಿ ವಿಶೇಷ ಸ್ಥಾನವನ್ನು ಪಡೆದಿದೆ. ಈ ಹಿನ್ನೆಲೆಯಲ್ಲಿ ಹಲವು ಮಾಹಿತಿಗಳೊಂದಿಗೆ ಇಲ್ಲಿ ಬರೆದಿರುವ ಲೇಖಕರು ಬೇಲೂರು ಮಠದಲ್ಲಿರುವ ಬ್ರಹ್ಮಚಾರಿ ಪ್ರಶಿಕ್ಷಣ ಕೇಂದ್ರದಲ್ಲಿ ತರಬೇತಿ ಪಡೆಯುತ್ತಿದ್ದಾರೆ.

ಶ್ರೀಮಾತೆ ಶಾರದಾದೇವಿಯವರ ದಿವ್ಯ ಜೀವನವನ್ನು ಓದಿದ ಪ್ರತಿಯೊಬ್ಬರಿಗೂ ಶ್ರೀ ಜಗದ್ಧಾತ್ರಿಯ ಪರಿಚಯ ಇರಲೇಬೇಕು. ಆದರೆ ಈ ದೇವಿಯ ಪೂರ್ಣ ಪರಿಚಯವು ಹೆಚ್ಚಿನ ಜನರಿಗೆ ಇರುವುದಿಲ್ಲ. ಬಹಳ ಹಿಂದಿನ ಕಾಲದಿಂದಲೂ ಶ್ರೀ ಜಗದ್ಧಾತ್ರಿಯ ಉಪಾಸನೆಯು ನಡೆದುಕೊಂಡು ಬಂದಿದೆ. ಅನೇಕ ಸಾಧಕರು ತಮ್ಮ ಪ್ರಬಲ ಸಾಧನೆಗಳಿಂದ ಶ್ರೀ ದೇವಿಯನ್ನು ಸಾಕ್ಷಾತ್ಕರಿಸಿಕೊಂಡಿದ್ದಾರೆ. ಶ್ರೀ ಜಗದ್ಧಾತ್ರೀ ದೇವಿಯ ದಿವ್ಯ ಆವಿರ್ಭಾವದ ಪರಿಚಯ ಮಾಡಿಸಿಕೊಡುವುದೇ ಈ ಲೇಖನದ ಉದ್ದೇಶ.

### 'ಜಗದ್ಧಾತ್ರಿ' ಶಬ್ದದ ಅರ್ಥ:

'ಯಾರು ಜಗತ್ತನ್ನು ಧರಿಸಿ ಪೋಷಿಸುತ್ತಿರುವಳೋ, ಅವಳೇ ಜಗದ್ಧಾತ್ರಿ'.

**ಧಾತ್ರೀ ಮಾತಾ ಸಮಾಖ್ಯಾತಾ**
**ಧಾರಣೇ ಚೋಪಗೀಯತೇ।**
**ತ್ರಯಾಣಾಂ ಚೈವ ಲೋಕಾನಾಂ**
**ನಾಮ ತ್ರೈಲೋಕ್ಯಧಾತೃಕಾ॥**

**ಯಸ್ಮಾತ್ ಧಾರಯತೇ ಲೋಕಾನ್**
**ವೃತ್ತಿಮೇಷಾಂ ದದಾತಿ ಚ।**
**ಡುಧಾಞ್ ಧಾರಣೇ ಧಾತುಃ**
**ತಸ್ಮಾತ್ ಧಾತ್ರೀ ಮತಾ ಬುಧೈಃ ॥**

—'' 'ಧಾತ್ರೀ' ಶಬ್ದದ ಅರ್ಥ 'ಧರಿಸಿರುವವಳು' ಎಂದು. ಅವಳು ಮಾತೃಸ್ವರೂಪಿಣಿ. ಮೂರುಲೋಕಗಳನ್ನು ಧರಿಸಿದ ಕಾರಣ ತಾಯಿಯು ತ್ರೈಲೋಕ್ಯಧಾತೃಕಾ.''(ದೇವೀ ಪುರಾಣ).

### ಶ್ರೀ ಶ್ರೀ ಜಗದ್ಧಾತ್ರಿಯ ಧ್ಯಾನ ಮತ್ತು ಸ್ವರೂಪ

'ತಂತ್ರಸಾರ'ದಲ್ಲಿ ಹೇಳಿರುವ ದೇವಿಯ ಧ್ಯಾನವು ಇಂತಿದೆ:

**ಸಿಂಹಸ್ಕಂಧಸಮಾರೂಢಾಂ ನಾನಾಲಂಕಾರಭೂಷಿತಾಂ ।**
**ಚತುರ್ಭುಜಾಂ ಮಹಾದೇವೀಂ ನಾಗಯಜ್ಞೋಪವೀತಿನೀಮ್ ॥**
**ಶಂಖಶಾರ್ಙ್ಗ-ಸಮಾಯುಕ್ತ-ವಾಮಪಾಣಿ-ದ್ವಯಾನ್ವಿತಾಂ ।**
**ಚಕ್ರಂ ಚ ಪಂಚಬಾಣಾಂಶ್ಚ ಧಾರಯಂತೀಂ ಚ ದಕ್ಷಿಣೇ ॥**



**ರಕ್ತವಸ್ತ್ರ- ಪರೀಧಾನಾಂ ಬಾಲಾರ್ಕಸದೃಶೀತನೂಮ್ ।**
**ನಾರದಾದ್ಯೈರ್ಮುನಿಗಣೈಃ ಸೇವಿತಾಂ ಭವಸುಂದರೀಮ್ ॥**
**ತ್ರಿವಲೀ-ವಲಯೋಪೇತಾಂ -ನಾಭಿನಾಲಮೃಣಾಲಿನೀಂ ।**
**ರತ್ನದ್ವೀಪೇ -ಮಹಾದ್ವೀಪೇ - ಸಿಂಹಾಸನಸಮನ್ವಿತೇ ॥**
**ಪ್ರಫುಲ್ಲ-ಕಮಲಾರೂಢಾಂ ಧ್ಯಾಯೇತ್ತಾಂ ಭವಗೇಹಿನೀಮ್ ।**

''ಸಿಂಹದ ಮೇಲೆ ಆರೂಢಳಾಗಿರುವವಳು, ನಾನಾ ಅಲಂಕಾರಗಳಿಂದ ಶೋಭಿಸುವವಳು, ನಾಲ್ಕು ಭುಜಗಳನ್ನು ಉಳ್ಳವಳು, ನಾಗನನ್ನು ಯಜ್ಞೋಪವೀತವಾಗಿ ಧರಿಸಿರುವವಳು, ತನ್ನ

ಎಡ ಕೈಗಳಲ್ಲಿ ಶಂಖ ಮತ್ತು ಬಿಲ್ಲನ್ನು, ತನ್ನ ಬಲ ಕೈಗಳಲ್ಲಿ ಚಕ್ರ ಮತ್ತು ಪಂಚಬಾಣಗಳನ್ನು ಧರಿಸಿರುವವಳು, ರಕ್ತಾಂಬರವನ್ನು ಉಟ್ಟವಳು, ಉದಯಿಸುತ್ತಿರುವ ಸೂರ್ಯನಂತೆ ಕಾಂತಿಯುತ ಶರೀರವುಳ್ಳವಳು, ನಾರದಾದಿ ಮುನಿಗಳಿಂದ ಸೇವಿಸಲ್ಪಟ್ಟವಳು , ಶಿವಮನೋಹರಿಯು, ತ್ರಿವಳಿ ವಲಯಗಳಿಂದ ಕೂಡಿದ ಮೃಣಾಲ ವಿಶಿಷ್ಟ ಪದ್ಮದಂತೆ ನಾಭಿಯುಳ್ಳವಳು, ರತ್ನದ್ವೀಪ ರೂಪದ ಮಹಾಪೀಠದ ಸಿಂಹಾಸನದ ಮೇಲೆ ಪೂರ್ಣವಾಗಿ ಅರಳಿದ ಕಮಲದಲ್ಲಿ ವಿರಾಜಮಾನಳಾಗಿರುವವಳು, ಶಿವಕುಟುಂಬಿನಿಯೂ ಆದ ಮಹಾದೇವಿಯನ್ನು ಧ್ಯಾನಿಸುತ್ತೇನೆ.''

## ಶಾಸ್ತ್ರಗಳಲ್ಲಿ ಶ್ರೀ ಜಗದ್ಧಾತ್ರೀ ಪೂಜೆ

ಶ್ರೀ ಜಗದ್ಧಾತ್ರೀ ಪೂಜೆಯನ್ನು ವಿಶ್ವಸಾರತಂತ್ರ, ಮಾಯಾ ತಂತ್ರ, ತಂತ್ರಸಾರ, ಕಲ್ಪಸಾರ, ಜ್ಞಾನಸಾರಸ್ವತ, ಶಕ್ತಿಸಂಗಮ ತಂತ್ರಗಳಲ್ಲಿ ಕಾಣಬಹುದು. ಅಷ್ಟೇ ಅಲ್ಲದೆ ದಾಕ್ಷಿಣಾತ್ಯ ತಂತ್ರವೆನ್ನಲಾಗುವ ಕಾತ್ಯಾಯನೀ ತಂತ್ರದಲ್ಲಿಯೂ ಶ್ರೀ ಜಗದ್ಧಾತ್ರಿಯ ಉಲ್ಲೇಖವನ್ನು ನೋಡಬಹುದು. 'ಶ್ರೀ ದುರ್ಗಾಸಪ್ತಶತಿ'ಯ ಪ್ರಥಮ ಚರಿತ್ರದಲ್ಲಿ ಬ್ರಹ್ಮನು ಯೋಗಮಾಯೆಯಾದ ಜಗದಂಬೆಯನ್ನು 'ವಿಶ್ವೇಶ್ವರೀಂ ಜಗದ್ಧಾತ್ರೀಂ ಸ್ಥಿತಿಸಂಹಾರಕಾರಿಣೀಂ' ಎಂದು ಸ್ತುತಿಸಿದ್ದಾನೆ.

ಬಂಗಾಳದ ಆಧುನಿಕ ಸ್ಮೃತಿಕಾರರಾದ ಶ್ರೀ ರಘುನಂದನರ ಸ್ಮೃತಿಯಲ್ಲಿ ಶ್ರೀ ಜಗದ್ಧಾತ್ರೀ ಪೂಜೆಯು ಉಲ್ಲೇಖಗೊಂಡಿಲ್ಲ. ಆದರೆ ಅವರಿಗಿಂತಲೂ ಪುರಾತನರಾದ ೧೫ನೇ ಶತಮಾನ ಶೂಲಪಾಣಿಯ 'ಕಾಲವಿವೇಕ'ವೆಂಬ ಸ್ಮೃತಿಗ್ರಂಥದಲ್ಲಿ ಶ್ರೀ ಜಗದ್ಧಾತ್ರೀ ಪೂಜೆ, ಉಪಾಸನಾದಿಗಳ ಉಲ್ಲೇಖವಿದೆ.

## ಶ್ರೀ ಜಗದ್ಧಾತ್ರೀ ಪೂಜಾ ಮಹೋತ್ಸವದ ಉಗಮ

ಶ್ರೀ ಜಗದ್ಧಾತ್ರಿ ಪೂಜೆಯು ಹಿಂದೆ ಇತ್ತಾದರೂ ಇಂದಿನಂತಿರಲಿಲ್ಲ. ಆಗ ಶ್ರೀದೇವಿಯನ್ನು ಯಂತ್ರ ಅಥವಾ ಕಲಶದಲ್ಲಿ ಪೂಜಿಸಲಾಗುತ್ತಿತು. ಮೃತ್ತಿಕಾ ವಿಗ್ರಹಗಳ ಪೂಜೆ ಪ್ರಚಲಿತವಿರಲಿಲ್ಲ.

ನದಿಯಾ ನಗರಿಯ ರಾಜನಾದ ರಾಜಾ ಕೃಷ್ಣಚಂದ್ರನು ಶಕ್ತಿಯ ಉಪಾಸಕನಾಗಿದ್ದನು. ಪ್ರತಿವರ್ಷ ಶರತ್ಕಾಲದಲ್ಲಿ ಶ್ರೀ ದುರ್ಗೆಯನ್ನು ಪ್ರತಿಮಾರೂಪದಲ್ಲಿ ಪೂಜಿಸುವುದು ಅವನ ವಾಡಿಕೆಯಾಗಿತ್ತು. ಒಮ್ಮೆ ಈ ರಾಜನು ಅಂದಿನ ಬಂಗಾಳದ ನವಾಬನಾಗಿದ್ದ ಆಲಿ ವರ್ದಿಖಾನನಿಗೆ ಕರ ಕಟ್ಟಲಿಲ್ಲ. ಇದರಿಂದ ಕೋಪಗೊಂಡ ನವಾಬನು ಕೃಷ್ಣಚಂದ್ರನನ್ನು ಸೆರೆಹಿಡಿದು ಮುರ್ಶಿದಾಬಾದಿನ ಬಂದೀಖಾನೆಯಲ್ಲಿರಿಸಿದನು. ಎಷ್ಟೋ ತಿಂಗಳ ನಂತರ ರಾಜ ಸೆರೆಯಿಂದ ಮುಕ್ತನಾದನು. ಮುರ್ಶಿದಾಬಾದಿನಿಂದ ತನ್ನ ರಾಜ್ಯವಾದ ನದಿಯಾಗೆ ಜಲಮಾರ್ಗವಾಗಿ ನೌಕೆಯಲ್ಲಿ ಬರುತ್ತಿದ್ದಾಗ ಎಲ್ಲೆಲ್ಲೂ ಶಾರದೀಯ ದುರ್ಗಾಪೂಜೆಯ ಹರ್ಷವು ಮನೆಮಾಡಿದ್ದನ್ನು ಕಂಡನು. ವಿಜೃಂಭಣೆಯಿಂದ ಮೊಳಗುತ್ತಿದ್ದ ಡೋಲು-ಢಕ್ಕೆಗಳ ನಿನಾದ ದಶದಿಕ್ಕುಗಳಲ್ಲಿ ಪ್ರತಿಧ್ವನಿಸುತ್ತಿತ್ತು. ಅಂದು ವಿಜಯದಶಮಿಯಾಗಿತ್ತು. ಇದನ್ನು ಕಂಡ ರಾಜ ಈ ವರ್ಷ ತಾನು ದುರ್ಗಾಪೂಜೆ ಆಚರಿಸಲಿಲ್ಲವೆಂದು ಹತಾಶನಾದ. ಅತ್ಯಂತ ದುಃಖವಿಹ್ವಲನಾದ ರಾಜನಿಗೆ ದೇವಿಯು ಸ್ವಪ್ನದಲ್ಲಿ ಕಾಣಿಸಿಕೊಂಡು, ''ನನ್ನನ್ನು ಬರುವ ಕಾರ್ತಿಕಮಾಸದ ಶುಕ್ಲ ನವಮಿಯಂದು ಪೂಜಿಸು!'' ಎಂದು ಆಜ್ಞೆಯಿತ್ತಳು. ಆದರೆ ಇಲ್ಲಿ ಕೌತುಕವೊಂದು ರಾಜನಿಗೆ ಕಾಡಿತು. ಅದೇನೆಂದರೆ ಸ್ವಪ್ನದಲ್ಲಿ ಕಾಣಿಸಿಕೊಂಡ ದೇವಿಯು ತಾನು ಪ್ರತಿವರ್ಷ ಆರಾಧಿಸುವ ಮಹಿಷಮರ್ದಿನಿಯಂತೆ ದಶಭುಜೆಯಾಗಿರದೆ ಚತುರ್ಭುಜೆಯಾಗಿದ್ದಳು. ಆಕೆಯ ಶರೀರ ತಪ್ತ ಬಂಗಾರದವರ್ಣದಂತೆ ಇರದೆ, ಬಾಲರವಿಯಂತೆ ಕಂಗೊಳಿಸುತ್ತಿತ್ತು. ಈ ದೇವಿಯು ಯಾರೆಂದು ತನ್ನ ಗುರುಗಳೂ, ಆಸ್ಥಾನ ಪಂಡಿತರೂ ಆದ ಅಂದಿನ ಬಂಗಾಳದ ತಾಂತ್ರಿಕ ಶ್ರೇಷ್ಠರೂ, ಶಾಕ್ತಾಚಾರ ಪ್ರವರ್ತಕರೂ, ಶಕ್ತಿ ಉಪಾಸಕರೂ ಆದ ಶ್ರೀ ಕೃಷ್ಣಾನಂದ ಆಗಮವಾಗೀಶರಲ್ಲಿ ಚರ್ಚಿಸಿದಾಗ, ಅವರು ಶಾಸ್ತ್ರಗಳೊಡನೆ ಹೊಂದಿಸಿ, ಈ ದೇವಿಯು 'ಶ್ರೀ ಜಗದ್ಧಾತ್ರೀ ದುರ್ಗಾ' ಎಂದು ತೀರ್ಪು ನೀಡಿದರು. ದೇವಿಯ ಆದೇಶದಂತೆ, ಗುರುವಿನ ಮಾರ್ಗದರ್ಶನದೊಂದಿಗೆ ರಾಜಾ ಕೃಷ್ಣಚಂದ್ರನು ಮೃತ್ತಿಕಾ ವಿಗ್ರಹ ಮಾಡಿಸಿ, ಪೂಜೆ ಮಾಡಿಸಿದನು. ಹೀಗೆ ೧೭೬೩ರಲ್ಲಿ ಜಗದ್ಧಾತ್ರೀ ಪೂಜೆಯು ಹೊಸ ರೀತಿಯಲ್ಲಿ ಆರಂಭವಾಯಿತು.

## ಶ್ರೀ ಜಗದ್ಧಾತ್ರಿಯ ಆವಿರ್ಭಾವ

ಒಮ್ಮೆ ಪ್ರಳಯಕಾಲದಲ್ಲಿ ಬ್ರಹ್ಮಾಂಡವೆಲ್ಲ ಕಾರಣ ಸಲಿಲದಲ್ಲಿ ಲಯವಾಯಿತು. ವಿಶ್ವಂಭರನಾದ ಮಹಾವಿಷ್ಣುವು ಕಾರಣ ಸಲಿಲದಲ್ಲಿ ತೇಲುತ್ತಿದ್ದನು. ನಾರಾಯಣನಿಗೆ ಆಗ ಸೃಷ್ಟಿ ಮಾಡುವ ಮನಸ್ಸಾಗಿ ಮಹಾಮಾಯೆಯಲ್ಲಿ ಶರಣು ಹೊಂದಿದನು. ಆಗ ವಿಶ್ವಂಭರನ ನಾಭಿಕಮಲದಿಂದ ರಕ್ತಪದ್ಮವೊಂದು ಉದಿಸಿತು. ಅದರಲ್ಲಿ ಶಿಶುರೂಪದ ಚತುರ್ಮುಖ ಬ್ರಹ್ಮನು ಮಲಗಿದ್ದನು. ಆ ಬ್ರಹ್ಮನನ್ನು ಕುರಿತು ವಿಶ್ವಂಭರನು ಸೃಷ್ಟಿಕಾರ್ಯವನ್ನು ಮಾಡುವಂತೆ ಆಜ್ಞಾಪಿಸಿದನು. ಬ್ರಹ್ಮನು ಮೊದಲು ಏಳು ಜನ ಋಷಿಗಳನ್ನು ಸೃಷ್ಟಿಸಿದನು. ಆದರೆ ಆ ಏಳು ಜನ ಋಷಿಗಳು ಸೃಷ್ಟಿಕಾರ್ಯದಲ್ಲಿ ಯಾವುದೇ ಆಸಕ್ತಿ ತೋರಲಿಲ್ಲ. ಮತ್ತೆ ಬ್ರಹ್ಮನು ಕಶ್ಯಪ ಮಹರ್ಷಿಯನ್ನು ಸೃಷ್ಟಿಸಿ, ಜೊತೆಯಾಗಿ ಹೆಣ್ಣೊಬ್ಬಳನ್ನು ಸೃಷ್ಟಿಸಿದನು. ಮತ್ತು ಸೃಷ್ಟಿಕಾರ್ಯ ಮಾಡುವಂತೆ ಆಜ್ಞಾಪಿಸಿದನು. ಹೀಗೆ ಎಲ್ಲ ಜೀವಿಗಳಲ್ಲಿ ಗಂಡು-ಹೆಣ್ಣುಗಳನ್ನು ಸೃಷ್ಟಿಸಿ ಸೃಷ್ಟಿಕಾರ್ಯದಲ್ಲಿ ಪ್ರವೃತ್ತರನ್ನಾಗಿಸಿದನು. ಸೃಷ್ಟಿಕಾರ್ಯ ಜರಗಿತು. ಕಾರಣಸಲಿಲದ ಮೇಲೆ ವಿಶ್ವಂಭರ ನಾರಾಯಣನು ತೇಲುತ್ತಿದ್ದನು. ಮಹಾಮಾಯೆಯು ವಟಪತ್ರದ (ಆಲದೆಲೆಯ) ರೂಪ ಧರಿಸಿ ಅವನಿಗೆ ಆಧಾರವಾದಳು.

ಆಗ ವಿಶ್ವಂಭರನು –

**ವಟಪತ್ರ ಸ್ವರೂಪಾ ತ್ವಂ ಯತೋ ಮಾಂ ವಿಧೃತಾಂಭಸಿ ।**
**ಅತೋ ಧರ್ಮಸ್ವರೂಪಾಽಸಿ ಜಗತ್ಯಸ್ಮಿನ್ ಸನಾತನಿ ॥**

''ವಟಪತ್ರ ಸ್ವರೂಪಿಣಿಯಾದ ನೀನು ಹೇಗೆ ನನ್ನನ್ನು ಈ ಜಲದಲ್ಲಿ ಧರಿಸಿದ್ದೀಯೋ, ಹಾಗೆಯೇ, ಹೇ ಸನಾತನಿ! ಈ ಜಗತ್ತನ್ನು ಧರ್ಮಸ್ವರೂಪದಿಂದ ಧರಿಸು'' ಎಂದು ಪ್ರಾರ್ಥಿಸಿದನು. ಆಗಿನಿಂದ ಮಹಾಮಾಯೆಯು 'ಜಗದ್ಧಾತ್ರೀ' ಎಂದು ಪ್ರಸಿದ್ಧಳಾದಳು. ಇದು ಮಾಯಾತಂತ್ರದ ಮತ.

ಕೇನೋಪನಿಷತ್ತಿನಲ್ಲಿ ಹೇಳಲ್ಪಟ್ಟಿರುವ 'ಉಮಾ ಹೈಮವತಿ'ಯೇ ಜಗದ್ಧಾತ್ರಿ ಎಂದು ಪಂಡಿತರು ಅಭಿಪ್ರಾಯಪಟ್ಟಿದ್ದಾರೆ. 'ಕಾತ್ಯಾಯನೀ ತಂತ್ರ'ದ ೭೬ನೇ ಪಟಲದಲ್ಲಿ ಬರುವ ಜಗದ್ಧಾತ್ರಿಯ ಉಲ್ಲೇಖ ಹೀಗಿದೆ ಮತ್ತು ಕೇನೋಪನಿಷತ್ತನ್ನು ಹೋಲುತ್ತದೆ: ಒಮ್ಮೆ ದೇವಾಸುರ ಯುದ್ಧಾನಂತರ ಇಂದ್ರ, ಅಗ್ನಿ, ವಾಯು ಮತ್ತು ಚಂದ್ರರು ದೇವತೆಗಳ ವಿಜಯಕ್ಕೆ ತಾವೇ ಕಾರಣರು, ಮತ್ತು ತಾವೇ ಈಶ್ವರರು ಎಂದು ಅಹಂಕಾರಪಡಲಾರಂಭಿಸಿದರು. ಆಗ ಪರಾಶಕ್ತಿಯು ಈ ನಾಲ್ವರ ಮುಂದೆ ತೇಜೋರಾಶಿಯ ರೂಪದಿಂದ ಪ್ರಕಟಳಾಗಿ, ಹುಲ್ಲೊಂದನ್ನು ಇರಿಸಿ, ಅದನ್ನು ತಮ್ಮ ಪರಾಕ್ರಮದಿಂದ ಅಲುಗಾಡಿಸಲು ಹೇಳಿದಳು. ಈ ನಾಲ್ಕು ದೇವತೆಗಳು ತಮ್ಮ ಎಲ್ಲ ಶಕ್ತಿ ಮತ್ತು ಪರಾಕ್ರಮದಿಂದ ಎಷ್ಟು ಪ್ರಯತ್ನಪಟ್ಟರೂ ಆ ಹುಲ್ಲನ್ನು ಅಲುಗಾಡಿಸಲಾಗಲಿಲ್ಲ. ಸೋತ ದೇವತೆಗಳು ಆ ಪರಾಶಕ್ತಿಯಲ್ಲಿ ಶರಣು ಹೊಂದಿದರು. ಆಗ ಪರಾಶಕ್ತಿಯು ಜಗದ್ಧಾತ್ರಿಯ ರೂಪವನ್ನು ಧರಿಸಿ ಪ್ರಕಟಳಾದಳು ಮತ್ತು ಅವರ ಗರ್ವಭಂಗ ಮಾಡಿ, ತನ್ನ ಸಾನ್ನಿಧ್ಯದಿಂದಲೇ ಇವರೆಲ್ಲರೂ ಶಕ್ತಿವಂತರೇ ಹೊರತು ಸ್ವತಂತ್ರರಲ್ಲ ಎಂದು ತೋರಿಸಿದಳು.

**ತೇಜಸ್ಯಂತರ್ಹಿತೇ ತಸ್ಮಿನ್ ಚಮತ್ಕಾರಾ ಕಲೇವರೇ ।**
**ಮೃಗೇಂದ್ರೋಪರಿ ಸುಸ್ಮೇರಾ ಸರ್ವಾಲಂಕಾರಭೂಷಿತಾ ॥**
**ಚತುರ್ಭುಜಾ ಮಹಾದೇವೀ ರಕ್ತಾಂಬರಧರಾ ಶುಭಾ ।**
**ಬಾಲಾರ್ಕಸದೃಶೀದೇಹಾ ನಾಗಯಜ್ಞೋಪವೀತಿನೀ ॥**
**ತ್ರಿನೇತ್ರಾ ಕೋಟಿಚಂದ್ರಾಭಾ ದೇವರ್ಷಿಮುನಿಸೇವಿತಾ ॥**

'ಆ ತೇಜೋರಾಶಿಯಿಂದ ಕೂಡಿದ, ಚಮತ್ಕಾರ ಶರೀರ ವಿಶಿಷ್ಟಳಾದ ದೇವಿಯು ಸಿಂಹಾರೂಢಳು, ಮಂದಹಾಸಮುಖವುಳ್ಳವಳು, ಸರ್ವಾಲಂಕಾರಭೂಷಿತಳು, ಚತುರ್ಭುಜಗಳುಳ್ಳವಳು, ರಕ್ತಾಂಬರಳು, ಮಂಗಳಸ್ವರೂಪಿಣಿಯು, ಉದಯಿಸುತ್ತಿರುವ ಸೂರ್ಯನಂತೆ ಕಾಂತಿಯನ್ನು ಹೊಂದಿದ ದೇಹವುಳ್ಳವಳು, ನಾಗನನ್ನು ಯಜ್ಞೋಪವೀತವಾಗಿ ಧರಿಸಿರುವವಳು, ಮೂರು ಕಣ್ಣುಗಳುಳ್ಳವಳು, ಕೋಟಿ ಚಂದ್ರರಂತೆ ಶೀತಲವಾಗಿ ಕಂಗೊಳಿಸುವವಳು, ದೇವತೆಗಳು ಋಷಿಗಳು ಹಾಗೂ ಮುನಿಗಳಿಂದ ಸೇವಿಸಲ್ಪಡುವ ಮಹಾದೇವಿಯು (ಆವಿರ್ಭೂತಳಾದಳು).'

**ದರ್ಶಯಾಮಾಸ ದೇವಾನಾಂ ಏವಂ ರೂಪಂ ಜಗನ್ಮಯೀ ।**
**ತತಸ್ತಾಂ ತುಷ್ಟುವುರ್ದೇವಾ ಜಗದ್ಧಾತ್ರೀಂ ಮಹೇಶ್ವರೀಂ ॥**

'ಜಗನ್ಮಯೀ ಮಹಾದೇವಿಯು ದೇವತೆಗಳಿಗೆ ಈ ರೀತಿ ಸ್ವರೂಪವನ್ನು ತೋರಿಸಿದಳು. ನಂತರ ದೇವತಾಗಣವು ಜಗದ್ಧಾತ್ರೀ ಮಹೇಶ್ವರಿಯನ್ನು ಸ್ತೋತ್ರಗಳಿಂದ ತೃಪ್ತಿಪಡಿಸಿದರು.'

'ಶ್ರೀದೇವೀ ಭಾಗವತ'ದಲ್ಲೂ ಇಂತಹದೊಂದು ಪ್ರಸಂಗದ ಉಲ್ಲೇಖವಿದೆ. ಆದರೆ ಅಲ್ಲಿ ವೇದವ್ಯಾಸರಿಂದ ಜಗದ್ಧಾತ್ರಿಯೆಂಬ ತಾಯಿಯ ಹೆಸರನ್ನು ಬಳಸಲಾಗಿಲ್ಲ.

**ಕಾರ್ತಿಕೇ ಶುಕ್ಲಪಕ್ಷೇಽಹನಿ ಭೌಮವಾರೇ ಜಗತ್ಪ್ರಸೂಃ ।**
**ಸರ್ವದೇವ ಹಿತಾರ್ಥಾಯ ದುರ್ವೃತ್ತಶಮನಾಯ ಚ ॥**
**ಆವಿರಾಸೀತ್ ಜಗತ್ ಶಾಂತ್ಯೈ ಯುಗಾದೌ ಪರಮೇಶ್ವರೀ ।**

'ದೇವತೆಗಳ ಹಿತ, ಅಧರ್ಮದ ನಾಶ ಮತ್ತು ಜಗತ್ತಿನ ಶಾಂತಿಗಾಗಿ (ತ್ರೇತಾ) ಯುಗದ ಪ್ರಾರಂಭದಲ್ಲಿ ಕಾರ್ತಿಕ ಮಾಸದ ಶುಕ್ಲಪಕ್ಷದ ಮಂಗಳವಾರದಂದು ಪರಮೇಶ್ವರಿಯು ಆವಿರ್ಭೂತಳಾದಳು'. (ದುರ್ಗಾಕಲ್ಪ)

ಶೂಲಪಾಣಿಯ 'ಕಾಲವಿವೇಕ'ದಲ್ಲಿ

**'ಕಾರ್ತಿಕೋ ಅಮಲ ಪಕ್ಷಸ್ಯ ತ್ರೇತಾದ್ಯೇ ನವಮೇಽಹನಿ ।**
**ಪೂಜಾಯೇತ್ತಾಂ ಜಗದ್ಧಾತ್ರೀಂ ಸಿಂಹಪೃಷ್ಠೇ ನಿಷೇದುಶೀಮ್॥'**
ಎನ್ನಲಾಗಿದೆ. 'ತ್ರೇತಾಯುಗದ ಪ್ರಾರಂಭದಲ್ಲಿ ಕಾರ್ತಿಕಶುಕ್ಲ ನವಮಿಯಂದು ಸಿಂಹಪೃಷ್ಠಾಸೀನಳಾದ ದೇವಿ ಜಗದ್ಧಾತ್ರಿಯನ್ನು ಪೂಜಿಸಬೇಕು' ಎಂದು ಇದರ ಅರ್ಥ.

### ಶ್ರೀ ಜಗದ್ಧಾತ್ರೀ ಪೂಜಾಕಲ್ಪ

'ಕಲ್ಪ' ಎಂದರೆ ಶಾಸ್ತ್ರವಿಧಿ. ಶ್ರೀ ಜಗದ್ಧಾತ್ರೀ ಪೂಜೆಯ ಬಗ್ಗೆ 'ನಿಗಮ ಕಲ್ಪಸಾರ' ಮತ್ತು 'ಜ್ಞಾನಸಾರಸ್ವತ'ದಲ್ಲಿ ಇಂತಿದೆ:

**(ಕಾರ್ತಿಕಸ್ಯ) ಸಪ್ತಮ್ಯಾ ದಿನವಮ್ಯಂತಂ ಪೂಜಕಾಲಮಿತೀರಿತಂ ।**
**ತ್ರಿದಿನೇ ತ್ರಿವಿಧಾ ಪೂಜಾ ದಶಮ್ಯಾಂಚ ವಿಸರ್ಜಯೇತ್ ॥**

### ಶಕ್ತಿಸಂಗಮತಂತ್ರದ ಪ್ರಕಾರ ಹೀಗಿದೆ:

**ಕಾರ್ತಿಕಸ್ಯ ಸಿತೇ ಪಕ್ಷೇ ನವಮ್ಯಾಂ ಜಗದೀಶ್ವರೀಂ ।**
**ತ್ರಿಕಾಲಮೇಕಕಾಲಂ ವಾ ವರ್ಷೇ ವರ್ಷೇ ಪ್ರಪೂಜಯೇತ್ ॥**

'ಮಾಯಾತಂತ್ರ' ಹೇಳುತ್ತದೆ :

**ಪ್ರಪೂಜಯೇತ್ ಜಗದ್ಧಾತ್ರೀಂ ಕಾರ್ತಿಕೇ ಶುಕ್ಲಪಕ್ಷಕೇ।**
**ದಿನೋದಯೇ ಚ ಮಧ್ಯಾಹ್ನೇ ಸಾಯಾಹ್ನೇ ನವಮೇಽಹನಿ ॥**

ಈ ಮೇಲಿನ ಶ್ಲೋಕಗಳ ಪ್ರಕಾರ ಜಗದ್ಧಾತ್ರೀ ಪೂಜೆಗೆ ಮೂರು ವಿಕಲ್ಪಗಳಿವೆ.

೧. ಕಾರ್ತಿಕ ಶುಕ್ಲ ಸಪ್ತಮಿಯಿಂದ ಆರಂಭಿಸಿ ನವಮಿಯವರೆಗೆ ಪೂಜಿಸಿ ದಶಮಿಯಂದು ವಿಸರ್ಜಿಸುವುದು.

೨. ಕಾರ್ತಿಕ ಶುಕ್ಲ ನವಮಿಯಂದು ತ್ರಿಕಾಲಗಳಲ್ಲಿ ಪೂಜಿಸುವುದು.

೩. ಕಾರ್ತಿಕ ಶುಕ್ಲ ನವಮಿಯಂದು ಒಂದು ಬಾರಿ ಪೂಜಿಸುವುದು.

ಹೀಗೆ ಜಗದ್ಧಾತ್ರಿಯನ್ನು ಮೂರು ಕಲ್ಪಗಳಿಗನುಸಾರ ಪೂಜಿಸುತ್ತಾರೆ.

## ಇಂದಿನ ದಿನಗಳಲ್ಲಿ ಜಗದ್ಧಾತ್ರೀ ಪೂಜೆ

ಶ್ರೀ ಜಗದ್ಧಾತ್ರೀ ಮೂರ್ತಿಪೂಜೆಯು ಕೃಷ್ಣನಗರದಲ್ಲಿ ಜನ್ಮ ತಳೆದರೂ, ಇಂದು ಅದು ಚಂದನನಗರದಲ್ಲಿ ಬಹಳ ಪ್ರಸಿದ್ಧವಾಗಿದೆ. ೧೭೬೮ರಲ್ಲಿ ಮೊದಲಬಾರಿಗೆ ಇಲ್ಲಿ ಕೆಲವು ಅಕ್ಕಿ ವ್ಯಾಪಾರಿಗಳು ಸೇರಿಕೊಂಡು ಜಗದ್ಧಾತ್ರಿ ಪೂಜೆಯನ್ನು ಆಚರಿಸಿದ್ದರು. ಈಗ ಜಗದ್ಧಾತ್ರಿಯು ಚಂದನನಗರದಲ್ಲಿ ಮನೆ ಮನೆಗಳಲ್ಲಿಯೂ, ಮಂಟಪಗಳಲ್ಲಿಯೂ ಪೂಜೆಯನ್ನು ಸ್ವೀಕರಿಸುತ್ತಾಳೆ. ದುರ್ಗಾಪೂಜೆಯು ಇಲ್ಲಿ ಅಷ್ಟೊಂದು ಪ್ರಮುಖ



ವಾಗಿಲ್ಲ. ಮಹಾರಾಷ್ಟ್ರದ ಗಣೇಶೋತ್ಸವದಂತೆ, ಈ ಊರಿನ ಜಗದ್ಧಾತ್ರೀ ಪೂಜೆಯು ವಿಖ್ಯಾತವಾದದ್ದು. ಜಗದ್ಧಾತ್ರಿಯ ದೊಡ್ಡ ದೊಡ್ಡ ಮನೋಹರ ಮೂರ್ತಿಗಳು ಇಲ್ಲಿ ಭಕ್ತರಿಂದ ಪೂಜಿಸಲ್ಪಡುತ್ತವೆ. ಜಗದ್ಧಾತ್ರಿಯ ಪೂಜೆಯನ್ನು ನೋಡಲು ಬಯಸುವವರು ಚಂದನನಗರಕ್ಕೊಮ್ಮೆ ಬರಲೇಬೇಕು. ಚಂದನನಗರವು ವಿದ್ಯುತ್ ದೀಪಾಲಂಕಾರಕ್ಕೆ ಹೆಸರುವಾಸಿ. ಇಡೀ ಚಂದನನಗರವೇ ಈ ಉತ್ಸವದ ಸಮಯದಲ್ಲಿ ವಿದ್ಯುತ್ ದೀಪಗಳಿಂದ ಅಲಂಕೃತವಾಗಿರುತ್ತದೆ. ಎಲ್ಲೆಡೆಯಿಂದ ಈ ಉತ್ಸವವನ್ನು ಆನಂದಿಸಲು ಇಲ್ಲಿಗೆ ಭಕ್ತರು ಧಾವಿಸುತ್ತಾರೆ. ಶತಮಾನಗಳಷ್ಟು ಹಳೆಯ ಪೂಜಾಪರಂಪರೆಗಳನ್ನು ಇಲ್ಲಿ ಕಾಣಬಹುದು. ಇಲ್ಲಿನ ವಿಶೇಷವೆಂದರೆ ದೇವಿಯ ವಿಗ್ರಹವು ತಂತ್ರ ಶಾಸ್ತ್ರೋಕ್ತವಾಗಿಯೇ ನಿರ್ಮಾಣವಾಗುವುದೇ ಹೊರತು ಬೇರೆಬೇರೆ ವಿನ್ಯಾಸಗಳಲ್ಲಿ ನಿರ್ಮಿಸಲ್ಪಡುವುದಿಲ್ಲ. ಆದ್ದರಿಂದಲೇ ಎಲ್ಲಾ ಮೂರ್ತಿಗಳೂ ದೇವಿಯ ಧ್ಯಾನಕ್ಕೆ ಅನುಗುಣವಾಗಿ ನೋಡಲು ಒಂದೇ ರೀತಿಯಾಗಿರುತ್ತವೆ. ಇದೇ ಈ ಮೂರ್ತಿಗಳ, ಉತ್ಸವದ ಹರ್ಷವನ್ನು ನೂರ್ಮಡಿಗೊಳಿಸುತ್ತದೆ. ಕೃಷ್ಣನಗರದಲ್ಲಿ ರಾಜಾ ಕೃಷ್ಣಚಂದ್ರನು ಆರಂಭಿಸಿದ ಪೂಜೆಯು ಇಂದಿಗೂ ಮುಂದುವರಿದುಕೊಂಡು ಬಂದಿದೆ. ಜಯರಾಮಬಾಟಿ, ಬೇಲೂರು ಮಠದ ಶಾರದಾಪೀಠ, ರಾಂಚಿ, ನಾರಾಯಣಪುರ, ಭೋಪಾಲ ರಾಮಕೃಷ್ಣ ಮಠಗಳಲ್ಲಿ ಶ್ರೀ ಜಗದ್ಧಾತ್ರೀ ಪೂಜೆ ಆಚರಿಸಲ್ಪಡುತ್ತಿದೆ. ಜಯರಾಮಬಾಟಿಯಲ್ಲಿ ಅದು ಇನ್ನೂ ವಿಶೇಷ. ಬೇಲೂರು ಮಠದಲ್ಲಿ ಈ ಪೂಜೆಯನ್ನು ಆಚರಿಸಲಾಗುವುದಿಲ್ಲ. ಸಾಮಾನ್ಯವಾಗಿ ಯಾರು ಶರನ್ನವರಾತ್ರಿಯಲ್ಲಿ ದುರ್ಗಾಪೂಜೆಯನ್ನು ಆಚರಿಸಲಾಗುವುದಿಲ್ಲವೋ, ಅವರು ಶ್ರೀ ಜಗದ್ಧಾತ್ರೀ ಪೂಜೆಯನ್ನು ಆಚರಿಸುತ್ತಾರೆ.

## ಶ್ರೀಮಾತೆ ಶಾರದಾದೇವಿಯವರು ಮತ್ತು ಶ್ರೀಜಗದ್ಧಾತ್ರೀ

ಒಮ್ಮೆ ಜಯರಾಮಬಾಟಿಯಲ್ಲಿ ಶ್ರೀಮಾತೆಯ ತಾಯಿ ಶ್ಯಾಮಾಸುಂದರೀದೇವಿ ಕಾಳೀಪೂಜೆಗಾಗಿ ಅಕ್ಕಿಯನ್ನು ಸಂಗ್ರಹಿಸಿದ್ದಳು. ಏನೋ ಒಂದು ಕಲಹದಿಂದಾಗಿ ನವಮುಖರ್ಜಿ ಎಂಬುವವನು ಕೋಪಗೊಂಡು ಶ್ಯಾಮಾಸುಂದರಿದೇವಿ ಸಂಗ್ರಹಿಸಿದ ಅಕ್ಕಿಯನ್ನು ಅಂಗೀಕರಿಸಲಿಲ್ಲ. ಅತಿ ಭಕ್ತಿಯಿಂದ ಅಕ್ಕಿ ಸಂಗ್ರಹಿಸಿದ್ದ ಶ್ಯಾಮಾಸುಂದರೀ ದೇವಿ ಅತ್ಯಂತ ದುಃಖಗ್ರಸ್ತಳಾದಳು. ಕಾಳಿಗಾಗಿ ಸಂಗ್ರಹಿಸಿದ್ದ ಅಕ್ಕಿಯನ್ನು ಈಗ ಯಾರು ತಿನ್ನುವರು ಎಂದು ಪದೇ ಪದೇ ಕೊರಗಿದಳು. ಹೀಗಿರುವಾಗ ರಾತ್ರಿ ಒಬ್ಬ ದೇವಿ ಬಂದು ಶ್ಯಾಮಾಸುಂದರಿಯನ್ನು ಎಬ್ಬಿಸಿ ಹೀಗೆಂದಳು: ''ನೀನು ಅಳುವುದೇತಕೆ? ಕಾಳಿಯ ಅಕ್ಕಿಯನ್ನು ನಾನು ತಿನ್ನುತ್ತೇನೆ'' ಆಗ ಶ್ಯಾಮಾಸುಂದರಿ, 'ನೀನು ಯಾರು?'ಎಂದು ಕೇಳಿದಾಗ, ಆ ದೇವಿಯು ''ನಾನು ಜಗದಂಬೆ, ಜಗದ್ಧಾತ್ರೀ ರೂಪದಲ್ಲಿ ನಿನ್ನ ಪೂಜೆಯನ್ನು ಅಂಗೀಕರಿಸುವೆನು'' ಎಂದಳು.

ಮರುದಿನ ಬೆಳಗ್ಗೆ ಶ್ಯಾಮಾಸುಂದರೀ ದೇವಿ ಶ್ರೀಮಾತೆಯವರನ್ನು ಆ ದೇವಿಯ ಕುರಿತಾಗಿ ವಿಚಾರಿಸಿದಳು — ''ಮೈಯಲ್ಲಿ ಕೆಂಪುಬಣ್ಣ, ಕಾಲಿನ ಮೇಲೆ ಕಾಲಿಟ್ಟ ದೇವಿಯ ಹೆಸರೇನು?'' ಎಂದು ಕೇಳಿದಾಗ ಶ್ರೀಮಾತೆ, ''ಅವಳು ಜಗದ್ಧಾತ್ರಿ'' ಎಂದು ಉತ್ತರಿಸಿದರು.

ಆಗ ಶ್ಯಾಮಾಸುಂದರಿ, ''ನಾನು ಜಗದ್ಧಾತ್ರಿ ಪೂಜೆ ಮಾಡುತ್ತೇನೆ'' ಎಂದಳು. ಬರುವ ಕಾರ್ತಿಕದಲ್ಲಿ ಜಗದ್ಧಾತ್ರೀ ಪೂಜೆಗೆ ಬೇಕಾದ ಎಲ್ಲ ವ್ಯವಸ್ಥೆಯನ್ನು ಮಾಡಿಕೊಂಡು ಜಗದ್ಧಾತ್ರಿಯನ್ನು ಮೂರ್ತಿಯಲ್ಲಿ ಪೂಜಿಸಲಾಯಿತು. ಮುಂದಿನ ವರ್ಷ ಶ್ಯಾಮಾಸುಂದರಿಗೆ ಜಗದ್ಧಾತ್ರೀ ಪೂಜೆ ಮಾಡಲು ಶ್ರೀಮಾತೆ ಪ್ರೋತ್ಸಾಹಿಸಲಿಲ್ಲ. ಕಾರಣ, ಅವರ ಆರ್ಥಿಕ ಪರಿಸ್ಥಿತಿ ಚೆನ್ನಾಗಿರ

ಲಿಲ್ಲ. ಹೀಗೆ ಮಾತುಕತೆಯಾದ ರಾತ್ರಿಯೇ ಶ್ರೀಮಾತೆಗೆ ಸ್ವಪ್ನದಲ್ಲಿ ಜಯೆ-ವಿಜಯೆಯರೊಂದಿಗೆ ಶ್ರೀ ಜಗದ್ಧಾತ್ರೀ ದೇವಿಯು ಕಾಣಿಸಿಕೊಂಡು ''ಹಾಗಾದರೆ ನಾವು ಇಲ್ಲಿಂದ ಹೋಗೋಣವೆ?'' ಎಂದಳು. ಇದನ್ನು ಕಂಡ ಶ್ರೀಮಾತೆ, ''ನೀವುಗಳು ಯಾರು?'' ಎಂದು ವಿಚಾರಿಸಿದರು. ಆಗ ಆ ದೇವಿಯು, 'ನಾನು ಜಗದ್ಧಾತ್ರೀ' ಎಂದು ಉತ್ತರಿಸಿದಳು. ಶ್ರೀಮಾತೆ ಆಗ, ''ನೀವು ಹೋಗುವುದು ಬೇಡ. ನಿಮಗೆ ಹೋಗಲು ನಾನು ಹೇಳಿಲ್ಲವಲ್ಲ'' ಎಂದರು. ಅಂದಿನಿಂದ ಪ್ರತಿ ವರ್ಷವೂ ಜಗದ್ಧಾತ್ರೀ ಪೂಜೆ ನಡೆದುಕೊಂಡು ಬಂತು. ಪ್ರತಿ ವರ್ಷ ಜಗದ್ಧಾತ್ರೀ ಪೂಜಾ ಸಮಯದಲ್ಲಿ ಶ್ರೀಮಾತೆ ಜಯ ರಾಮಬಾಟಿಗೆ ಹೋಗುತ್ತಿದ್ದರು. ಮೊದಲ ನಾಲ್ಕು ವರ್ಷ ಪೂಜೆಯ ಸಂಕಲ್ಪವನ್ನು ಶ್ಯಾಮಾಸುಂದರೀದೇವಿಯ ಹೆಸರಿನಲ್ಲಿ, ನಂತರದ ನಾಲ್ಕು ವರ್ಷ ಶ್ರೀಮಾತೆಯ ಹೆಸರಿನಲ್ಲಿ, ನಂತರದ ನಾಲ್ಕು ವರ್ಷ ಶ್ರೀಮಾತೆಯವರ ಚಿಕ್ಕಪ್ಪ ನೀಲಮಾಧವರ ಹೆಸರಿನಲ್ಲಿ ಮಾಡಲಾಗಿತ್ತು. ಹೀಗೆ ಹನ್ನೆರಡು ವರ್ಷ ಪೂಜೆಯಾದ ಬಳಿಕ ಶ್ರೀಮಾತೆಯವರು ಪೂಜೆಯನ್ನು ಮುಂದುವರಿಸದೆ ಇರಲು ಯೋಚನೆ ಮಾಡಿದರು. ಆ ರಾತ್ರಿಯೇ ದೇವಿಯು ಕಾಣಿಸಿಕೊಂಡು 'ಹಾಗಾದರೆ ನಾನು ಹೋಗಲೆ?' ಎಂದು ಮೂರು ಬಾರಿ ಕೇಳಿದಳು. ಆಗ ಶ್ರೀಮಾತೆ ದೇವಿಯ ಚರಣಗಳನ್ನು ಹಿಡಿದುಕೊಂಡು 'ನಾನು ನಿನ್ನನ್ನು ಹೋಗಲು ಬಿಡಲಾರೆ, ಪ್ರತಿವರ್ಷವೂ ನಿನ್ನ ಪೂಜೆ ಮಾಡುತ್ತೇನೆ' ಎಂದರು. ಪ್ರತಿವರ್ಷ ಈ ಪೂಜೆಯನ್ನು ನೆರವೇರಿಸಲು, ಮೂರುವರೆ ಎಕರೆ ಜಮೀನನ್ನು ೧೮೯೪ಳ ಕೊಂಡುಕೊಳ್ಳಲಾಯಿತು. ೧೯೧೬ರಲ್ಲಿ ಶ್ರೀಮಾತೆ ಈ ಜಮೀನನ್ನು ಶ್ರೀಜಗದ್ಧಾತ್ರಿಯ ಹೆಸರಿನಲ್ಲಿ ರಿಜಿಸ್ಟರ್ ಮಾಡಿಸಿದರು. ಈ ಜಮೀನನ್ನು ಕೊಂಡುಕೊಳ್ಳಲು ಮಾಸ್ಟರ್ ಮಹಾಶಯರು ಸ್ವಾಮಿ ಶಾರದಾನಂದರಿಗೆ ೩೨೦/- ರೂಪಾಯಿಯನ್ನು ಕೊಟ್ಟಿದ್ದರು. ಈ ಜಮೀನಿನ ಉತ್ಪನ್ನದಿಂದಲೇ ಇಂದಿಗೂ ಈ ಪೂಜೆಯು ಬಹಳ ವೈಭವೋಪೇತವಾಗಿ ನೆರವೇರುತ್ತಿದೆ. ಜಗದ್ಧಾತ್ರೀ ದೇವಿಯು ಶ್ರೀಮಾತೆಯವರಿಗೆ ಜಯಾ-ವಿಜಯಾ ಎಂಬ ಇಬ್ಬರು ಸಖಿಯರ ಸಮೇತಳಾಗಿ ದರ್ಶನ ನೀಡಿದ ಕಾರಣ ಜಯರಾಮಬಾಟಿಯಲ್ಲಿ ದೇವಿಯ ಶ್ರೀ ವಿಗ್ರಹವು ಜಯಾ-ವಿಜಯಾ ಸಮೇತವಾಗಿಯೇ ಪೂಜೆಗೊಳ್ಳುವುದು.

## ಜಗದ್ಧಾತ್ರಿಯ ಬಗ್ಗೆ ಶ್ರೀರಾಮಕೃಷ್ಣರು

ಶ್ರೀರಾಮಕೃಷ್ಣರು ದೇವಿಯ ಜಗದ್ಧಾತ್ರೀ ಸ್ವರೂಪವನ್ನು ಹೀಗೆ ವಿವರಿಸಿದ್ದಾರೆ: ''ಈಶ್ವರೀಯ ರೂಪವನ್ನು ಒಪ್ಪಲೇಬೇಕು. ಜಗದ್ಧಾತ್ರೀ ರೂಪದ ಅರ್ಥ ಗೊತ್ತೆ? ಯಾರು ಜಗತ್ತನ್ನು ಧರಿಸಿರುವರೋ, ಅವಳೇ ಜಗದ್ಧಾತ್ರಿ! ಆಕೆ ಜಗತ್ತನ್ನು ಧರಿಸದಿದ್ದರೆ, ಪಾಲಿಸದಿದ್ದರೆ ಜಗತ್ತು ಬಿದ್ದು ಹೋಗುವುದು!''

ಜಗದ್ಧಾತ್ರಿಯ ಸಿಂಹವು ಕರೀಂದ್ರಾಸುರನೆಂಬ ಮದಗಜ ರೂಪದ ಅಸುರನನ್ನು ಮೆಟ್ಟಿ ನಿಂತಿರುವುದನ್ನು ಕಂಡ ಶ್ರೀ ಪರಮಹಂಸ ದೇವರು ಹೀಗೆ ಉದ್ಗರಿಸಿದ್ದಾರೆ : ''ಮನಸ್ಸೆಂಬ ಗಜವನ್ನು ಯಾರು ವಶದಲ್ಲಿರಿಸಬಲ್ಲರೋ, ಅವರ ಹೃದಯದಲ್ಲೇ ಜಗದ್ಧಾತ್ರಿಯು ಉದಯಿಸುತ್ತಾಳೆ. ಸಿಂಹವಾಹಿನಿಯ ಸಿಂಹ ಮನಸ್ಸೆಂಬ ಮದಗಜವನ್ನು ವಶಪಡಿಸಿಕೊಂಡಿದೆ.''

ಧರ್ಮಸ್ವರೂಪಿಣಿಯಾಗಿ ನಮ್ಮನ್ನೆಲ್ಲ ರಕ್ಷಿಸುತ್ತಿರುವ, ಪೋಷಿಸು ತ್ತಿರುವ ಈ ಜಗದ್ಧಾತ್ರೀ ಸ್ವರೂಪದ ನಿಜವಾದ ಉಪಾಸನೆಯೆಂದರೆ ನಾವೆಲ್ಲಾ ಧರ್ಮಮಾರ್ಗದಲ್ಲಿ ಬದುಕಿ, ಮನಸ್ಸೆಂಬ ಮದಿಸಿದ ಗಜವನ್ನು ಪಳಗಿಸಿ ಅದನ್ನು ಆಧ್ಯಾತ್ಮಿಕ ಮಾರ್ಗಕ್ಕೆ ಹರಿಸುವುದು; ಆಕೆಯಲ್ಲಿಯೇ ಪ್ರತಿನಿತ್ಯವೂ ಜೀವಿಸುವುದು.


**ಆಕರ ಗ್ರಂಥಗಳು :**

೧. ***ಹಿಂದೂದೇರ್ ದೇವ ದೇವಿ - ಉದ್ಭವ ಕ್ರಮ ವಿಕಾಸ (ಬಂಗಾಳಿ)***, *ಲೇಖಕರು: ಡಾ. ಹಂಸನಾರಾಯಣ ಭಟ್ಟಾಚಾರ್ಯ, ಫಾರ್ಮಾ ಕೆ.ಎಲ್.ಎಮ್. ಪ್ರೈ. ಲಿಮಿಟೆಡ್ - ೧೯೮೬ (ತರ್ಜುಮೆಗೊಂಡಿಲ್ಲ).*

೨. ***ಮಾಯಾತಂತ್ರ***, *ಸಂಪಾದಕರು - ಜ್ಯೋತಿರ್ಲಾಲ ದಾಸ್, ನವಭಾರತ ಪಬ್ಲಿಕೇಶನ್, ೧೯೭೮ (ತರ್ಜುಮೆಗೊಂಡಿಲ್ಲ).*

೩. ***ಬೃಹತ್ ತಂತ್ರಸಾರ:*** *ಸಂಕಲನ : ಶ್ರೀ ಕೃಷ್ಣಾನಂದ ಆಗಮವಾಗೀಶ; ಸಂಪಾದಕರು: ರಸಿಕ್ ಮೋಹನ್ ಚಟ್ಟೋಪಾಧ್ಯಾಯ. ನವಭಾರತ ಪಬ್ಲಿಕೇಶನ್ (ತರ್ಜುಮೆಗೊಂಡಿಲ್ಲ).*

೪. ***ಪೂಜಾವಿಜ್ಞಾನ,*** *ಸ್ವಾಮಿ ಪ್ರಮೇಯಾನಂದ, 'ಉದ್ಬೋಧನ' ಕಾರ್ಯಾಲಯ, ೧೯೯೯ (ತರ್ಜುಮೆಗೊಂಡಿಲ್ಲ).*

೫. ***ದೇವದೇವಿ ಓ ತಾದೇರ್ ವಾಹನ್*** *- ಸ್ವಾಮಿ ನಿರ್ಮಲಾನಂದ, ಪ್ರಣವ ಮಠ (ತರ್ಜುಮೆಗೊಂಡಿಲ್ಲ).*

೬. ***ಮಹಾಮಾತೆ ಶ್ರೀ ಶಾರದಾದೇವಿ,*** *ಮೂಲ: ಸ್ವಾಮಿ ಗಂಭೀರಾನಂದ, ಕನ್ನಡ ಅನುವಾದ: ಸ್ವಾಮಿ ಪ್ರಣವೇಶಾ*


> ''ಅತಿಕ್ರಮಿಸಲಾಗದ ಶಕ್ತಿಯುಳ್ಳವಳೆ, ಪ್ರಪಂಚಕ್ಕೆಲ್ಲ ನೀನೊಬ್ಬಳೇ ಅವಲಂಬನವಾಗಿರುವೆ. ಏಕೆಂದರೆ ನೀನು ಈ ಭೂಮಿಯ ರೂಪವನ್ನು ಧರಿಸಿ ಎಲ್ಲವಕ್ಕೂ ಆಶ್ರಯವನ್ನು ಕೊಟ್ಟಿರುವೆ. ನೀರಿನ ಸ್ವರೂಪದಲ್ಲಿರುವ ನಿನ್ನಿಂದ ಈ ಪ್ರಪಂಚವೆಲ್ಲ ಪುಷ್ಟಿಯನ್ನು ಹೊಂದುವುದು.''
>
> — ದುರ್ಗಾಸಪ್ತಶತೀ